ಕರ್ನಾಟಕ ಸರ್ಕಾರ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಿ4(7)(1)ಪ್ರೌಶಿಹೆಶಿಸ್ಥ.01/2012-13 ದಿನಾಂಕ:15.03.2013

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು, On Line ಮೂಲಕ ಗುರುತಿಸಿ ಸ್ಥಳಾಂತರಿಸುವಬಗ್ಗೆ

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011, ದಿ:01.04.2011
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 173 ಇಟಿಆರ್ 2007, ದಿ:15.10.2007.
3. ಈ ಕಛೇರಿಯ ಸುತ್ತೋಲೆ ಪತ್ರ ದಿನಾಂಕ:02.03.2012 ಮತ್ತು 10.07.2012
4. ಈ ಕಛೇರಿಯ ಜ್ಞಾಪನ ಸಮಸಂಖ್ಯೆ ದಿನಾಂಕ:22.03.2012
5. ಈ ಕಛೇರಿಯ ಟಿಪ್ಪಣಿ ಸಂಖ್ಯೆನಿ.(ಪ್ರೌ.ಶಿ)ಹೆಚ್ಚುವರಿ ಶಿಕ್ಷಕರು-01/2012.13 ದಿ:30.06.2012
6. ಸರ್ಕಾರದ ಪತ್ರ ಸಂಖ್ಯೆ ಇಡಿ380 ಎಲ್‌ಬಿಪಿ 2012 ದಿನಾಂಕ:-31-12-2012

*******

ಉಲ್ಲೇಖಿತ (1)ರ ಸರ್ಕಾರಿ ಆದೇಶದ ಪ್ರಕಾರ ಪ್ರೌಢಶಾಲೆಗಳಲ್ಲಿ ಹೆಚ್ಚುವರಿಯಾಗಿರುವ ಸಹಶಿಕ್ಷಕರ ಹುದ್ದೆಗಳನ್ನು ಗುರುತಿಸಿ ಅಗತ್ಯವಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ವರ್ಷ ಸ್ಥಳಾಂತರಿಸಬೇಕಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರಿ ಆದೇಶದ ಕಂಡಿಕೆ 4(1)(1) ರ ಪ್ರಕಾರ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸಬೇಕಾಗಿರುವುದರಿಂದ, ಸ್ಥಳಾಂತರದಿಂದಾದ ಸ್ಥಳನಿಯುಕ್ತಿಯೂ ಕೂಡ ವರ್ಗಾವಣೆಯಾಗುತ್ತದೆ ಹಾಗೂ ಸದರಿ ಉಲ್ಲೇಖ (2)ರ ಸರ್ಕಾರಿ ಆದೇಶದ ನಿಯಮ 15 ಅನ್ವಯಿಸುತ್ತದೆ. ಹೆಚ್ಚುವರಿ ಶಿಕ್ಷಕರನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಯಾವುದೇ ಹುದ್ದೆಗೆ ಸ್ಥಳಾಂತರಿಸಬಹುದಾಗಿದೆ.

1. **ಹೆಚ್ಚುವರಿ ಹುದ್ದೆ ಗುರುತಿಸುವುದು.**

➢ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಲು ಮುಂದಿನ ಹಂತವಾರು ಕ್ರಮಗಳನ್ನು ಅನುಸರಿಸುವುದು.

**ಕೋಷ್ಟಕ (ಅ)**

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ (Section) |
|---|---|---|
| 1 | 70 ಕ್ಕಿಂತ ಕಡಿಮೆ | 1 ವಿಭಾಗ |
| 2 | 71-140 | 2 ವಿಭಾಗ |
| 3 | 141-210 | 3 ವಿಭಾಗ |
| 4 | 211-280 | 4 ವಿಭಾಗ |
| 5 | 281-350 | 5 ವಿಭಾಗ |

ಅದೇ ಶಾಲೆಯಲ್ಲಿ 2 ಅಥವಾ ಹೆಚ್ಚು ಮಾಧ್ಯಮಗಳಿದ್ದಲ್ಲಿ ವಿಭಾಗಗಳನ್ನು ಮಾಧ್ಯಮವಾರು-ತರಗತಿಯ ಮಕ್ಕಳ ಸಂಖ್ಯೆ ಆಧರಿಸಿ ಗುರುತಿಸಬೇಕು.

➢ 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1 1\2 ಶಿಕ್ಷಕರಂತೆ ಅವಕಾಶವಿದೆ.

➢ ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕಿಂತ ಹೆಚ್ಚಾಗಿರುವ ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕ ಹುದ್ದೆಗಳೆಂದು ಗುರುತಿಸುವುದು. (ಸ್ತರ ವಿನ್ಯಾಸಕ್ಕೆ ಉಲ್ಲೇಖಿತ-1 ರ ಸರ್ಕಾರದ ಆದೇಶ ಗಮನಿಸತಕ್ಕದ್ದು) ಹೆಚ್ಚುವರಿ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳಲ್ಲಿ ಯಾರು ಆ ಹುದ್ದೆಯಲ್ಲಿ ಹೆಚ್ಚಿನ ಸೇವೆ ಸಲ್ಲಿಸಿರುತ್ತಾರೋ ಅವರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.

## ಟಿಪ್ಪಣಿ:

- ಸ್ತರ ವಿನ್ಯಾಸದ ಶಿಕ್ಷಕರ ಜೊತೆಗೆ ಸಂಸ್ಕೃತ, ಉರ್ದು, ತೆಲುಗು, ತಮಿಳು, ಮರಾಠಿ, ಶಿಕ್ಷಕರನ್ನು ಹಾಗೂ ಭಾಷಾ ಅಲ್ಪಸಂಖ್ಯಾತ ಮಾಧ್ಯಮವಿರುವ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಿದ್ದಲ್ಲಿ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸುವಂತಿಲ್ಲ.
- ಕೆಲವು ಶಾಲೆಗಳಲ್ಲಿ ಆಂಗ್ಲ ಭಾಷಾ ಶಿಕ್ಷಕರ ಹುದ್ದೆಗಳು ಮಂಜೂರಾಗಿಲ್ಲ. ಇಂತಹ ಶಾಲೆಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 326 ಎಲ್.ಬಿ.ಪಿ 2010, ದಿ: 04.12.2010 ರ ಪ್ರಕಾರ ಒಂದಕ್ಕಿಂತ ಹೆಚ್ಚಿನ ಕಲಾ ಶಿಕ್ಷಕರಿದ್ದಲ್ಲಿ ಒಂದು ಕಲಾ ಶಿಕ್ಷಕರ ಹುದ್ದೆಯನ್ನು ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸುವುದು ಹಾಗೂ ಸದರಿ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಬಾರದು.
- ಒಂದು ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-1 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-2 ಎರಡೂ ಹುದ್ದೆಗಳಿದ್ದು, ಒಂದು ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆ ಹೆಚ್ಚುವರಿಯಾಗಿದ್ದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇ-1 ಹುದ್ದೆಯನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು.
- ಡಾ||ವೈದ್ಯನಾಥನ್ ಸಮಿತಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವಂತಿಲ್ಲ. ಇಂತಹ ಶಾಲೆಗಳಲ್ಲಿ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಸೇವೆಯಲ್ಲಿ ಮುಂದುವರೆಯಬೇಕು.
- ಪ್ರೌಢಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರುಗಳಿದ್ದಲ್ಲಿ (ವೃತ್ತಿ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ) ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಉಳಿಸಿಕೊಂಡು, ಉಳಿದ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಉಲ್ಲೇಖ-6 ರ ಸರ್ಕಾರದ ಪತ್ರದಲ್ಲಿ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢ ಶಾಲೆಗಲಲ್ಲಿರುವ ಸಂಗೀತ ಶಿಕ್ಷಕರ ಹುದ್ದೆಗಳನ್ನು ಸಂಗೀತ ಕಲಿಯುತ್ತಿರುವ ಮಕ್ಕಳ ಹಿತದೃಷ್ಟಿಯಿಂದ ಹೆಚ್ಚುವರಿಯೆಂದು ಪರಿಗಣಿಸದೇ ಆಯಾ ಶಾಲೆಗಳಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ತಿಳಿಸಿದ್ದು, ಅದರಂತೆ ಕ್ರಮ ಕೈಗೊಳ್ಳುವುದು.

## ವಿನಾಯಿತಿ:-

ಹೆಚ್ಚುವರಿ ಶಿಕ್ಷಕರಲ್ಲಿ ಕೆಳಕಂಡ ಶಿಕ್ಷಕರಿಗೆ ವಿನಾಯಿತಿ ನೀಡಲಾಗಿದೆ. ವಿನಾಯಿತಿಯನ್ನು ಕೆಳಗಿನಂತೆ ಅನುಕ್ರಮವಾಗಿ ನೀಡುವುದು. ಆದರೆ ಒಂದು ವಿಷಯದ ಎಲ್ಲಾ ಶಿಕ್ಷಕರು ವಿನಾಯಿತಿ ಪಟ್ಟಿಗೆ ಬಂದಲ್ಲಿ ವಿನಾಯಿತಿಯನ್ನು ಮುಂದಿನ ಅನುಕ್ರಮಣಿಕೆಯಲ್ಲಿ ನೀಡಿ ಉಳಿದ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಬೇಕು. ಒಂದು ವಿಷಯದಲ್ಲಿ ಹೆಚ್ಚುವರಿ ಶಿಕ್ಷಕರು ಮುಂದಿನ ಒಂದೇ ಗುಂಪಿನಲ್ಲಿ ಬಂದಲ್ಲಿ ಅವರಲ್ಲಿ ಹಿರಿಯ ಶಿಕ್ಷಕರು ಹೆಚ್ಚುವರಿಯಾಗುತ್ತಾರೆ.

- ಶೇಕಡಾ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಶಿಕ್ಷಕರು
- ಮಾಜಿ ಸೈನಿಕರ ಪತ್ನಿಯಾಗಿರುವ ಶಿಕ್ಷಕರು.
- ವಿಧವಾ ಶಿಕ್ಷಕರು.
- ತೀವ್ರತರ ಖಾಯಿಲೆ ಇರುವ ಶಿಕ್ಷಕರು
- 31.03.2013 ರಿಂದ ಮುಂದಿನ 2 ವರ್ಷಗಳಲ್ಲಿ ನಿವೃತ್ತರಾಗಲಿರುವ ಶಿಕ್ಷಕರು.
- ಸರ್ಕಾರದಿಂದ ಮಾನ್ಯತೆ ಪಡೆದ ಪ್ರೌಢಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು, ಉಪಾಧ್ಯಾಕ್ಷರು, ಖಜಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ – (ಒಟ್ಟಾರೆ ಸೇವಾವಧಿಯಲ್ಲಿ ಎರಡು ಅವಧಿಗೆ ಮಾತ್ರ ಸೀಮಿತಗೊಂಡು)
- ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾಗಿದ್ದಲ್ಲಿ ಡಿಪಿಎಆರ್‌ನಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಪ್ರಕಾರ ವಿನಾಯಿತಿಯಿರುವ ಶಿಕ್ಷಕರು.

## 2. ಹೆಚ್ಚುವರಿ ಹುದ್ದೆ ಸ್ಥಳಾಂತರಿಸುವ ಕ್ರಮ:

- ದಿನಾಂಕ: 30-09-2012 ರ ಸರಾಸರಿ ಹಾಜರಾತಿ ಅನುಸರಿಸಿ ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರರಿರುವ ಶಾಲೆಗಳ ಪಟ್ಟಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಯವರು ತಯಾರಿಸಿ ಉಪನಿರ್ದೇಶಕರುಗಳಿಗೆ ಕಳುಹಿಸಬೇಕು. ಮಾಹಿತಿ ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು ಉಪನಿರ್ದೇಶಕರು ಪ್ರಕಟಿಸುವುದು.
- ಹೆಚ್ಚುವರಿಯಾಗುವ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸಬಹುದು.

- ಹೆಚ್ಚುವರಿಯಾಗಿರುವ ಖಾಲಿ ಹುದ್ದೆ ಮತ್ತು ಅಗತ್ಯವಿರುವ ಹುದ್ದೆಗಳ ವಿಷಯಗಳು ಹೊಂದಾಣಿಕೆ ಆಗದಿದ್ದಾಗ ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 109 ರಂತೆ ಹುದ್ದೆ ಪರಿವರ್ತನೆಗೆ ಕರ್ನಾಟಕ ಆರ್ಥಿಕ ಸಂಹಿತೆ ಪ್ರಪತ್ರ 23 ರಂತೆ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸಬೇಕು ಅಗತ್ಯ ವಿಷಯಗಳಲ್ಲಿ ಇಂಗ್ಲೀಷ್ ಕೂಡಾ ಇದ್ದರೆ ಈ ವಿಷಯಕ್ಕೂ ಪ್ರಸ್ತಾವ ಕಳುಹಿಸಬಹುದು.
- ಶಿಕ್ಷಕರಿಂದ ಆಕ್ಷೇಪಣೆ ಸ್ವೀಕರಿಸಿದ ನಂತರ ಲೋಪದೋಷಗಳಿದ್ದಲ್ಲಿ ಸರಿಪಡಿಸಿ ಅಂತಿಮವಾಗಿ ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು.
- ಹೆಚ್ಚುವರಿ ಖಾಲಿಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು. ಮತ್ತು ದಿನಾಂಕ: 28-02-2013 ರಂದು ಖಾಲಿಯಿರುವ (ಸ್ಥಳಾಂತರಗೊಂಡಿರುವ ಹುದ್ದೆಗಳು ಸೇರಿದಂತೆ) ಹುದ್ದೆಗಳನ್ನು ಪ್ರಕಟಿಸುವುದು. ಅಗತ್ಯತೆಯನ್ನು ತಿಳಿಯಲು 30-09-2012 ರ ವಿದ್ಯಾರ್ಥಿಗಳ ಸರಾಸರಿ ಹಾಜರಾತಿಯೇ ಆಧಾರ

### 3.ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಕ್ರಮ:

- ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಆದ್ಯತಾಪಟ್ಟಿ ಸಿದ್ದಪಡಿಸುವುದು.
- ಹೆಚ್ಚುವರಿ ಶಿಕ್ಷಕರ ಆದ್ಯತಾಪಟ್ಟಿ ಸಿದ್ದಪಡಿಸುವಾಗ ಒಟ್ಟು ಸೇವಾ ಜೇಷ್ಠತೆಯನ್ನು ಪರಿಗಣಿಸಿ, ಕೆಳಗಿನಂತೆ ಆದ್ಯತೆ ನಿಗದಿಪಡಿಸುವುದು.
    - ಎ) ವಿನಾಯಿತಿ ಪಟ್ಟಿಯಲ್ಲಿದ್ದರೂ ಸಹ ಸ್ಥಳಾಂತರಿಸಬೇಕಾದ ಶಿಕ್ಷಕರು.
    - ಬಿ) ಪತಿಪತ್ನಿ ಪ್ರಕರಣಗಳಲ್ಲಿ ಮಹಿಳಾ ಶಿಕ್ಷಕರು.
    - ಸಿ) ಪತಿಪತ್ನಿ ಪ್ರಕರಣಗಳಲ್ಲಿ ಪುರುಷ ಶಿಕ್ಷಕರು.
    - ಡಿ) ಇತರೆ ಮಹಿಳಾ ಶಿಕ್ಷಕರು.
    - ಇ) ಇತರೆ ಪುರುಷ ಶಿಕ್ಷಕರು.
- ಆದ್ಯತಾ ಪಟ್ಟಿಗೆ ಶಿಕ್ಷಕರು ಆಕ್ಷೇಪಣೆ ನೀಡಲು ಐದು ದಿನ ಕಾಲಾವಕಾಶ ನೀಡುವುದು.
- ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವುದು.
- ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಆನ್‌ಲೈನ್ (online) ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶವನ್ನು ಸ್ಥಳದಲ್ಲಿಯೇ ನೀಡತಕ್ಕದ್ದು. ಕೌನ್ಸಿಲಿಂಗ್‌ಗೆ ಹಾಜರಾಗದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ, ನೊಂದಾಯಿತ ಅಂಚೆ ಮೂಲಕ ಸ್ಥಳ ನಿಯುಕ್ತಿ ಆದೇಶ ರವಾನಿಸುವುದು.
- 2012-13 ರ ನೇಮಕಾತಿಗೆ ನೀಡಿದ ಹುದ್ದೆಗಳನ್ನು ಸಿ ವಲಯದಲ್ಲಿ ಉಳಿಸಿಕೊಳ್ಳುವುದು. ಆದರ್ಶ ಶಾಲೆ ಮತ್ತು ಆರ್.ಎಂ.ಎಸ್.ಎ ಅಡಿ ಉನ್ನತೀಕರಿಸಿದ ಪ್ರೌಢಶಾಲೆಗಳ ಖಾಲಿ ಹುದ್ದೆಗಳನ್ನು ಈ ಪ್ರಕ್ರಿಯೆಯಿಂದ ತುಂಬಬಾರದು.
- ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಮಾಹಿತಿಯನ್ನು ನೀಡಲು ತಂತ್ರಾಂಶವನ್ನು ಸಿದ್ದ ಪಡಿಸಿದ್ದು ಇಲಾಖೆಯ ವೆಬ್‌ಸೈಟ್‌ನಲ್ಲಿ ದಿ:18.3.2013ರಿಂದ ಲಭ್ಯವಿರುತ್ತದೆ. ಈ ಆನ್ ಲೈನ್ ಮೂಲಕ ತುಂಬಲು ಇ ಆಡಳಿತ ಶಾಖೆಯಿಂದ ಸಧ್ಯದಲ್ಲೆ ಮಾರ್ಗ ಸೂಚಿ ನೀಡಲಾಗುವುದು.

ಅನುಬಂಧ-1 ರಲ್ಲಿ ನೀಡಿರುವ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದಂತೆ, ಸ್ಥಳಾಂತರ ಪ್ರಕ್ರಿಯೆ ಪೂರ್ಣಗೊಳಿಸಿ, ನಮೂನೆ-1 ರ ಪ್ರಕಾರ ಮಾಹಿತಿ ಭರ್ತಿ ಮಾಡಿ ದಿನಾಂಕ: 25.04.2013 ರಂದು ಇ.ಮೇಲ್ ಮೂಲಕ ಸಂಬಂಧಿಸಿದ ಆಯುಕ್ತಾಲಯಗಳ ನಿರ್ದೇಶಕರಿಗೆ ಹಾಗೂ ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು, ಇವರಿಗೆ ಕಳುಹಿಸತಕ್ಕದ್ದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

## ಅನುಬಂಧ – I

### ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಹೆಚ್ಚುವರಿ ಖಾಲಿ/ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸುವ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ.ಸಂ | ವಿಷಯ | ದಿನಾಂಕ | ಕ್ರಮ |
|---|---|---|---|
| 1 | 2012-13ರ ದಾಖಲಾತಿಯಂತೆ ಹೆಚ್ಚುವರಿ ಶಿಕ್ಷಕರು ಇರುವ / ಶಾಲೆ ಹಾಗೂ ಶಿಕ್ಷಕರನ್ನು ಗುರುತಿಸುವುದು. | 18.03.2013 ರಿಂದ 23.03.2013. | ಕ್ಷೇತ್ರ ಶಿಕ್ಷಣಾಧಿಕಾರಿ |
| 2 | 2012-13 ದಾಖಲಾತಿಯಂತೆ ಹೆಚ್ಚುವರಿ ಹುದ್ದೆ/ಶಿಕ್ಷಕರ ಅಗತ್ಯವಿರುವ ಶಾಲೆಗಳನ್ನು ಗುರುತಿಸಿ ಡಾಟಾ ಎಂಟ್ರಿ ಮಾಡುವುದು. | | |
| 3 | ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರ ಪಟ್ಟಿ/ಅವಶ್ಯವಿರುವ ಹುದ್ದೆಗಳ ಪಟ್ಟಿ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಯಲ್ಲಿ ಅನುಮೋದಿಸುವುದು. | 25.03.2013 ರಿಂದ 26.03.2013 | ಉಪನಿರ್ದೇಶಕರಿಂದ ಅನುಮೋದನೆ |
| 4 | ಡಾಟಾ ಪರಿಶೀಲನೆ, ದೋಷಗಳನ್ನು ಸರಿಪಡಿಸುವುದು | 27.03.2013 ರಿಂದ 28.03.2013 | ರಾಜ್ಯ ಮಟ್ಟದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್ |
| 5 | ರಾಜ್ಯ ಮಟ್ಟದಲ್ಲಿ ಅನುಮೋದನೆ | 30.03.2013 ರಿಂದ 01.04.2013 | ನಿರ್ದೇಶಕರು(ಪ್ರೌಢ) |
| 6 | ಹೆಚ್ಚುವರಿ ಇರುವ ಖಾಲಿ ಹುದ್ದೆಗಳ ಪ್ರಕಟಣೆ/ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇರುವ ಶಾಲೆಗಳ ಪಟ್ಟಿ ಪ್ರಕಟಣೆ | 02.04.2013 | ರಾಜ್ಯ |
| 7 | ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಣೆ | 03.04.2013 | ರಾಜ್ಯ/ಜಿಲ್ಲೆ/ಬ್ಲಾಕ್ |
| 8 | ಸಂಬಂಧಿಸಿದ ಶಿಕ್ಷಕರು ಆಕ್ಷೇಪಣೆಗಳನ್ನು ಸಲ್ಲಿಸುವುದು | 04.04.2013 ರಿಂದ 06.04.2013 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ |
| 9 | ಆಕ್ಷೇಪಣೆಗಳ ಪರಿಶೀಲನೆ | 08.04.2013 ರಿಂದ 12.04.2013 | ಬಿ.ಇ.ಓ ಹಾಗೂ ಉಪನಿರ್ದೇಶಕರು |
| 10 | ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು | 13.04.2013 | ನಿರ್ದೇಶಕರು(ಪ್ರೌಢ) |
| 11 | ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಅನುಮೋದನೆ | 14.04.2013 | ನಿರ್ದೇಶಕರು(ಪ್ರೌಢ) |
| 12 | ಹೆಚ್ಚುವರಿ ಶಿಕ್ಷಕರ ಅಂತಿಮ ಪಟ್ಟಿ ಪ್ರಕಟಣೆ | 16.04.2013 | ರಾಜ್ಯ/ಜಿಲ್ಲೆ/ತಾಲ್ಲೂಕು |
| 13 | ಹೆಚ್ಚುವರಿ ಶಿಕ್ಷಕರಿಗೆ ಕೌನ್ಸಿಲಿಂಗ್ ನಡೆಸುವುದು ಆದೇಶ ನೀಡುವುದು.ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮಾಡಿ ಆದೇಶ ಹೊರಡಿಸುವುದು. | 18.4.2013 20.04.2013 | ಬ್ಲಾಕ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ |
| 14 | ಅಂತಿಮವಾಗಿ ಆಯುಕ್ತರ ಕಚೇರಿಗೆ ವರದಿ ಮಾಡುವುದು. | 25.04.2013 | ಉಪನಿರ್ದೇಶಕರು |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

## ನಮೂನೆ – I

ಕಛೇರಿಯ ವಿಳಾಸ:

ಅ) ಶಾಲೆಗಳಿಗೆ ಹೆಚ್ಚುವರಿಯಾಗಿರುವ ವಿಷಯವಾರು ಹುದ್ದೆಗಳ ವಿವರ

| ಕ್ರ.ಸಂ | ಶಾಲೆಯ ಹೆಸರು | ವಿಭಾಗಗಳ ಸಂಖ್ಯೆ | ಒಟ್ಟು ಶಿಕ್ಷಕರ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು | | | | | | | | ಶಾಲೆಯಲ್ಲಿ ಹೆಚ್ಚುವರಿಯಾಗಿರುವ ವಿಷಯ ಶಿಕ್ಷಕರ ಹುದ್ದೆಗಳ ಪದನಾಮ ಹಾಗೂ ಸಂಖ್ಯೆ |
|---|---|---|---|---|---|---|---|---|---|---|---|---|---|
| | | | | | L1 | L2 | L3 | PCM | CBZ | Arts | PET | ವಿಶೇಷ ಶಿಕ್ಷಕರು | |
| | | | | | | | | | | | | | |

ಆ) ಶಾಲೆಗಳಿಗೆ ಅಗತ್ಯವಾಗಿರುವ ವಿಷಯವಾರು ಹುದ್ದೆಗಳ ವಿವರ

| ಕ್ರ.ಸಂ | ಶಾಲೆಯ ಹೆಸರು | ಒಟ್ಟು ಶಿಕ್ಷಕರ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ವಿಭಾಗಗಳ ಸಂಖ್ಯೆ | ಮಂಜೂರಾಗಿರುವ ಶಿಕ್ಷಕರ ಹುದ್ದೆಗಳು | | | | | | | | ಶಾಲೆಗೆ ಅಗತ್ಯವಿರುವ ವಿಷಯ ಶಿಕ್ಷಕರ ಹುದ್ದೆಗಳ ಪದನಾಮ ಹಾಗೂ ಸಂಖ್ಯೆ |
|---|---|---|---|---|---|---|---|---|---|---|---|---|---|
| | | | | | L1 | L2 | L3 | PCM | CBZ | Arts | PET | ವಿಶೇಷ ಶಿಕ್ಷಕರು | |
| | | | | | | | | | | | | | |

ಇ) ಹೆಚ್ಚುವರಿ ಪ್ರೌಢಶಾಲಾ ಶಿಕ್ಷಕರ ಸ್ಥಳಾಂತರದ ವಿವರ

| ಕ್ರ.ಸಂ | ಹೆಚ್ಚುವರಿ ಖಾಲಿ ಹುದ್ದೆಯ ಪದನಾಮ ಮತ್ತು ಶಾಲೆ | ಯಾವ ಶಾಲೆಗೆ ಖಾಲಿ ಹುದ್ದೆ ಸ್ಥಳಾಂತರಿಸಲಾಯಿತು | ಹೆಚ್ಚುವರಿ ಶಿಕ್ಷಕರಿರುವ ಹುದ್ದೆಯ ಪದನಾಮ ಮತ್ತು ಶಾಲೆ | ಯಾವ ಶಾಲೆಗೆ ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರಿಸಲಾಯಿತು |
|---|---|---|---|---|
| 1 | 2 | 3 | 4 | 5 |
| | | | | |